# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.23 ರ ನಾಗವಾರಕ್ಕೆ ಸಂಬಂಧಿಸಿದಂತೆ ದಿನಾಂಕ: 21.05.2022 ರಂದು ಶ್ರೀ.ಇಮ್ರಾನ್.ಪಿ.ಎ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಇಮ್ರಾನ್.ಪಿ.ಎ | ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು. |
| 2 | ಶ್ರೀ.ನಾಗರಾಜು | ಸಹಾಯಕ ಅಭಿಯಂತರರು & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.23 ನಾಗವಾರ |
| 3 | ಡಾ॥ ಶೋಭಾ.ಎನ್ | ಆರೋಗ್ಯ ವೈದ್ಯಾಧಿಕಾರಿಗಳು |
| 4 | ಶ್ರೀ.ರಾಯಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 5 | ಶ್ರೀ.ಸಂತೋಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 6 | ರವಿ.ಎಂ.ಎಸ್.ನಗರ | Street light |
| 7 | ಶ್ರೀ.ದಿಲೀಪ್.ಸಿ.ಜೆ | ಮಾರ್ಷಲ್ |
| 8 | ಶ್ರೀ.ಶಿವಕುಮಾರ್.ಬಿ | ಸ್ಥಳೀಯರು / ಸದಸ್ಯರು |
| 9 | ಶ್ರೀ.ಬೈಲಾಲ್ | ಸ್ಥಳೀಯರು / ಸದಸ್ಯರು |
| 10 | ಶ್ರೀ.ರವಿಚಂದರ್ | ಸ್ಥಳೀಯರು / ಸದಸ್ಯರು |
| 11 | ಖಮರ್ ಪಾಷಾ | ಸ್ಥಳೀಯರು / ಸದಸ್ಯರು |
| 12 | ಇಮ್ರಾನ್ | ಸ್ಥಳೀಯರು / ಸದಸ್ಯರು |
| 13 | ಚಂದ್ರಶೇಖರ್ | ಸ್ಥಳೀಯರು / ಸದಸ್ಯರು |
| 14 | ಆನಂದ್ ಕುಮಾರ್ | ಸ್ಥಳೀಯರು / ಸದಸ್ಯರು |
| 15 | ಅಬ್ದುಲ್ಲಾ | ಸ್ಥಳೀಯರು / ಸದಸ್ಯರು |
| 16 | ಫಾತಿಮ | ಸ್ಥಳೀಯರು / ಸದಸ್ಯರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಆರೋಗ್ಯ ವೈದ್ಯಾಧಿಕಾರಿಗಳು:- ವಾರ್ಡ್‌ನ ನಾಗವಾರ ಪ್ರದೇಶದಲ್ಲಿ ಶುಶ್ರೂಶಕರು ಹಾಗೂ ಆಶಾ ಕಾರ್ಯಕರ್ತೆಯರನ್ನು ಮನೆ ಮನೆಗೆ ಹೋಗಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಬೇಕೆಂದು ಹಾಗೂ ವಾರ್ಡ್‌ನ ವ್ಯಾಪ್ತಿಯಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯವೈದ್ಯಾಧಿಕಾರಿಗಳನ್ನು ನಿಯೋಜಿಸದೇ ಇಲ್ಲದೇ ಇರುವುದರಿಂದ ವಿಧವಾ ಪಿಂಚಣಿ ಮತ್ತು ವಯಸ್ಕರ ಪಿಂಚಣಿ ಸರಿಯಾಗಿ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)

2) **ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಕೊಳಾಯಿಗಳನ್ನು ಅಳವಡಿಸಿದ್ದು. ಮೀಟರ್ ಅಳವಡಿಸದೇ ಇಲ್ಲದೇ ಇರುವುದರಿಂದ ಮಾಸಿಕ ಬಿಲ್ ಮೊತ್ತ ಹೆಚ್ಚಾಗಿ ಬರುತ್ತದೆ ಎಂದು ಹಾಗೂ ಗಾಂಧಿನಗರ ಪರ್ವೀನ್ ಮಸೀದಿ ಹಿಂಭಾಗದ ರಸ್ತೆಯಲ್ಲಿ ಕುಡಿಯುವ ನೀರು ಮನೆ ಮನೆಗೆ ಬರುತ್ತಿಲ್ಲವೆಂದು ಈ ವಿಷಯದ ಬಗ್ಗೆ ಆರ್.ಟಿ.ನಗರ ಕಛೇರಿಯವರಿಗೆ ವಿಚಾರಿಸಲಾಗಿ ವಿದ್ಯುತ್ ವ್ಯತಯ ಇರುವುದರಿಂದ ಕುಡಿಯುವ ನೀರನ್ನು ಸರಭರಾಜು ಮಾಡಲಾಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಸದರಿ ರಸ್ತೆಯಲ್ಲಿ ಸಾರ್ವಜನಿಕ ಕೊಳಾಯಿ ಇಲ್ಲದೆ ಇರುವುದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಪೈಪ್‌ಲೈನ್ ಮತ್ತು ಕೊಳಾಯಿ ಅಳವಡಿಸಲು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ. ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ. ಕಲ್ಯಾಣನಗರ)**

3) **ಕಾಮಗಾರಿ ಇಲಾಖೆ:-** ವಾರ್ಡ್ ವ್ಯಾಪ್ತಿಯ ಫಾತೀಮ ಬಡಾವಣೆ. ಬೈರಪ್ಪ ಬಡಾವಣೆ. ಮಸೀದಿ ರಸ್ತೆ. ಚೂನಾಲೇನ್-1. ಸಮಧಾನನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚರಂಡಿಗಳ ಹೂಳನ್ನು ತೆಗೆಯಲು ಹಾಗೂ ಚೂನಾಲೇನ್ ಹತ್ತಿರ ಪೀಸ್ ಪ್ಯಾರಾಡೈಸ್ ಅಪಾರ್ಟ್‌ಮೆಂಟ್‌ನ ಗೋಡೆಯು ದುಸ್ಥಿತಿಯಲ್ಲಿದ್ದು. ಬೀಳುವ ಸಂಭವವಿರುತ್ತದೆ. 30 ಕೆ.ಜಿ.ಮುನೇಶ್ವರ ದೇವಸ್ಥಾನದ ಹತ್ತಿರ ಹಾಗೂ ಶಾಂಪುರ ಮುಖ್ಯರಸ್ತೆಯ ಸ್ಮಶಾನದ ಹತ್ತಿರ ಕಾಂಪೌಂಡ್ ನಿರ್ಮಿಸಲು ಮತ್ತು ಸಮಧಾನನಗರ ಅಂಬೇಡ್ಕರ್ ಭವನ ಮತ್ತು ಅಂಗನವಾಡಿ ಕಟ್ಟಡಕ್ಕೆ ಉಪಕರಣಗಳು ಅವಶ್ಯಕತೆಯಿದ್ದು ಅವುಗಳನ್ನು ಕಟ್ಟಡಕ್ಕೆ ಒದಗಿಸಲು ಸಭೆಯಲ್ಲಿ ತಿಳಿಸಿದರು. ಎಂ.ಎಂ.ಲೇನ್‌ನಲ್ಲಿ ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುತ್ತಿದ್ದು. ಮನೆಗಳು ತಳಮಟ್ಟದಲ್ಲಿರುವುದರಿಂದ ಅವುಗಳನ್ನು ತೆರವುಗೊಳಿಸಿ ಹೊಸದಾಗಿ ಮನೆಗಳನ್ನು ನಿರ್ಮಿಸಿಕೊಡಲು ಸಭೆಯಲ್ಲಿ ತಿಳಿಸಿದರು. ಮಳೆಗಾಲದಲ್ಲಿ ಸಭೆಯ ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ. ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರರವರು ತಿಳಿಸಿರುತ್ತಾರೆ.

**(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ)**

4) **ರಸ್ತೆ ಮೂಲಭೂತ ಸೌಕರ್ಯ :-** ವಾರ್ಡ್ ವ್ಯಾಪ್ತಿಯ ನಾಗವಾರ ಮುಖ್ಯರಸ್ತೆ. ಚರ್ಚ್ ರಸ್ತೆ. ಶಾಂಪುರ ಮುಖ್ಯರಸ್ತೆ. ಎ.ಎಂ.ಸಿ ರಸ್ತೆಗಳಲ್ಲಿ ಎರಡು ಬದಿಯ ಚರಂಡಿಗಳಲ್ಲಿ ಸಿಲ್ಟ್ ತುಂಬಿದ್ದು. ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ಹರಿದು ಮನೆಗಳಿಗೆ ನುಗ್ಗಿರುತ್ತದೆ ಮತ್ತು ಚರಂಡಿಯ ಮೇಲಿನ ಸ್ಲ್ಯಾಬ್‌ಗಳು ಕೆಲವು ಇಲ್ಲದೇ ಇರುವುದು ಕಂಡು ಬಂದಿದ್ದು. ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುತ್ತದೆ ಎಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬಿ.ಬಿ.ಎಂ.ಪಿ ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

**(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿ.ಬಿ.ಎಂ.ಪಿ)**

5) **ವಿದ್ಯುತ್ ವಿಭಾಗ:-** ವಾರ್ಡ್ ವ್ಯಾಪ್ತಿಯಲ್ಲಿ ಬರುವ ಗೋವಿಂದಪುರ ಮುಖ್ಯರಸ್ತೆ. ಗೋವಿಂದಪುರ ಪೋಲೀಸ್ ಠಾಣೆ ಹತ್ತಿರ ಕಂಬಗಳಿಂದ 5 ಅಡಿ ಎತ್ತರಕ್ಕೆ ತಂತಿಯನ್ನು ಅಳವಡಿಸಿರುತ್ತಾರೆ. ತಂತಿಗಳು ಕಟ್ಟಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದಾಗಿ ತಿಳಿಸಿದರು.

ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**(ಕ್ರಮ :- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ, 16ನೇ ಮಹಡಿ ಮೆಯೋಹಾಲ್, ಪಿ.ಯು.ಬಿ ಕಟ್ಟಡ)**

<u>6) ಘನತ್ಯಾಜ್ಯ ನಿರ್ವಹಣೆ</u>:- ವಾರ್ಡ್ ವ್ಯಾಪ್ತಿಯಲ್ಲಿ ಸರ್ವೋದಯನಗರ ಮುಖ್ಯರಸ್ತೆಯಲ್ಲಿ ಸ್ಮಶಾನವಿದ್ದು, ಸ್ಮಶಾನದ ಕಂಪೌಂಡ್ ಪಕ್ಕದಲ್ಲಿ ಘನತ್ಯಾಜ್ಯ ಸಂಗ್ರಹಣೆ ಕೇಂದ್ರವಿದ್ದು, ಘನತ್ಯಾಜ್ಯವನ್ನು ಸುರಿಯುತ್ತಿರುವುದರಿಂದ ತ್ಯಾಜ್ಯವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಹಾಗೂ ಸ್ಮಶಾನದ ಸುತ್ತಮುತ್ತಲು ಶುಚಿಯಾಗಿಡಬೇಕೆಂದು ತಿಳಿಸಿರುತ್ತಾರೆ ಹಾಗೂ ಗಾಂಧಿನಗರ 2ನೇ ಹಂತದಲ್ಲಿ ಮನೆ ಮನೆಗೆ ಕಸದ ವಾಹನ ಹೋಗದೆ ಇರುವುದರಿಂದ ಸದರಿ ಗುತ್ತಿಗೆದಾರರಿಗೆ ನೋಟೀಸ್ ನೀಡಲು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ :-ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)</u>

<u>7) ಬೃಹತ್ ಮಳೆನೀರು ಗಾಲುವೆ</u> :- ವಾರ್ಡ್ ವ್ಯಾಪ್ತಿಯ ಅಕ್ಷಯ ಅಪಾರ್ಟ್‌ಮೆಂಟ್ ಹತ್ತಿರ ಹಾಗೂ ಚೈತನ್ಯ ಶಾಲೆ ಹತ್ತಿರ ಬೃಹತ್ ಮಳೆ ನೀರುಗಾಲುವೆ ನಿರ್ಮಿಸಿದ್ದು, ಸದರಿ ನೀರುಗಾಲುವೆಯ ಬಿಟ್ಟಿರುವ ಸ್ಥಳದಲ್ಲಿ ಸಂಪೂರ್ಣವಾಗಿ ಪೂರ್ಣಗೊಳಿಸಬೇಕೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ : ಬೃಹತ್ ಮಳೆನೀರು ಗಾಲುವೆ ಬಿ.ಬಿ.ಎಂ.ಪಿ ಬೆಂಗಳೂರು)</u>

<u>8) ಸಹ ಕಂದಾಯ ಅಧಿಕಾರಿ (ಹೆಚ್.ಬಿ.ಆರ್)</u> :- ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಎಲೆಕ್ಷನ್ ವೋಟರ್ ಐ.ಡಿ (ಗುರುತಿನ ಚೀಟಿ) ಯನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲವೆಂದು ಈ ವಿಷಯದ ಬಗ್ಗೆ ಸಭೆಯಲ್ಲಿ ತಿಳಿಸಿರುತ್ತಾರೆ.

ಈ ಬಗ್ಗೆ ಸಹ ಕಂದಾಯ ಅಧಿಕಾರಿ, ಹೆಚ್.ಬಿ.ಆರ್ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ : ಸಹ ಕಂದಾಯ ಅಧಿಕಾರಿ ಹೆಚ್.ಬಿ.ಆರ್ ಉಪ-ವಿಭಾಗ ಬೆಂಗಳೂರು)</u>

<u>9) ಸ್ಲಂ ಬೋರ್ಡ್:-</u> ವಾರ್ಡ್ ವ್ಯಾಪ್ತಿಯ ಎಂ.ಎಂ.ಲೇನ್‌ನಲ್ಲಿ ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುತ್ತಿದ್ದು, ಮನೆಗಳು ತಳಮಟ್ಟದಲ್ಲಿರುವುದರಿಂದ ಅವುಗಳನ್ನು ತೆರವುಗೊಳಿಸಿ ಹೊಸದಾಗಿ ಮನೆಗಳನ್ನು ನಿರ್ಮಿಸಿಕೊಡಲು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಭೆಯ ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರರವರು ತಿಳಿಸಿರುತ್ತಾರೆ.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಲಂ ಬೋರ್ಡ್ ಉಪ-ವಿಭಾಗ ಬಿ.ಬಿ.ಎಂ.ಪಿ)</u>

ಮೇಲ್ಕಂಡ ಎಲ್ಲಾ ಅಂಶಗಳು ಕಾರ್ಯರೂಪಕ್ಕೆ ಬಂದಿರುವ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

ಶ್ರೀ.ನಾಗರಾಜು
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.23 ನಾಗವಾರ

(ಶ್ರೀ.ಇಮ್ರಾನ್.ಪಿ.ವಿ)
ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.23 ನಾಗವಾರ

<u>ಪ್ರತಿಯನ್ನು:</u>

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ವಿದ್ಯುತ್ ವಿಭಾಗ, 16ನೇ ಮಹಡಿ, ಪಿ.ಯು.ಬಿ ಬಿಲ್ಡಿಂಗ್, ಮೇಯೋಹಾಲ್, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
8. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಲ್ಯಾಣನಗರ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇ-9, ಉಪ- ವಿಭಾಗ, ಹೊರವರ್ತುಲ ರಸ್ತೆ, ನಾಗವಾರ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಸಹಾಯಕ ಕಂದಾಯ ಅಧಿಕಾರಿ ಹೆಚ್.ಬಿ.ಆರ್ ಉಪ-ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಕಛೇರಿಕಡತಕ್ಕೆ.